**ಓ.ಎಸ್. ನಂ. 44/2020** **ಡಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 17.11.2022 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಸರ್ವೆ ನಂ.32/3 ರ ಎರಡು ಕೈ ಬರವಣಿಗೆ ಪಹಣಿಯ ನಕಲನ್ನು ನಿಡಿ1 ಮತ್ತು ನಿಡಿ2 ಎಂದು, ಸರ್ವೆ ನಂ.32/3 ಮತ್ತು 28 ರ ಕಂಪ್ಯೂಟರ್ ಪಹಣಿಯನ್ನು ನಿಡಿ3 ಮತ್ತು ನಿಡಿ4 ಎಂದು, ಸರ್ವೆ ನಂ.32/3 ರ ಆರ್.ಆರ್. ನಕಲನ್ನು ನಿಡಿ5 ಎಂದು, ಕಂದಾಯ ರಶೀದಿಯನ್ನು ನಿಡಿ6 ಎಂದು, ವಂಶವೃಕ್ಷ ಪ್ರಮಾಣಪತ್ರವನ್ನು ನಿಡಿ7 ಎಂದು, ಆರ್.ಎ 12/2020 ರ ಮೇಲ್ಮನವಿಯ ಮೆಮೋವನ್ನು ನಿಡಿ8 ಎಂದು, ಮತದಾರರ ಪಟ್ಟಿಯ ದೃಢೀಕೃತ ನಕಲನ್ನು ನಿಡಿ9 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಮುಂದೂಡಲಾಯಿತು

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.